ವಿಟಿಪಿಸಿ ಕರ್ನಾಟಕ
# ವಿಶ್ವೇಶ್ವರಯ್ಯ ವ್ಯಾಪಾರ ಉತ್ತೇಜನ ಕೇಂದ್ರ
(ಕರ್ನಾಟಕ ಸರ್ಕಾರದ ಸಂಸ್ಥೆ)
ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ

ಸಂಖ್ಯೆ: ವಿಟಿಪಿಸಿ/ಪಿಸಿ-1/ಮೆಂಬರ್ ಶಿಪ್/2023-24 ದಿನಾಂಕ: 03-04-2023

## ಸುತ್ತೋಲೆ

ವಿಷಯ: ವಿಶ್ವೇಶ್ವರಯ್ಯ ವ್ಯಾಪಾರ ಉತ್ತೇಜನ ಕೇಂದ್ರದ ಸದಸ್ಯತ್ವ ಶುಲ್ಕವನ್ನು ಪರಿಷ್ಕರಿಸಿರುವ ಬಗ್ಗೆ.

ವಿಶ್ವೇಶ್ವರಯ್ಯ ವ್ಯಾಪಾರ ಉತ್ತೇಜನ ಕೇಂದ್ರ (ವಿಟಿಪಿಸಿ)ವು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಅಂಗಸಂಸ್ಥೆಯಾಗಿದ್ದು, ಈ ಸಂಸ್ಥೆಯು ರಾಜ್ಯ ಸರ್ಕಾರದ ರಫ್ತು ಉತ್ತೇಜನಾ ಸಂಸ್ಥೆಯಾಗಿದ್ದು ರಾಜ್ಯ ಮತ್ತು ಕೇಂದ್ರ ಸರ್ಕಾರದ ರಫ್ತು ಉತ್ತೇಜನ ಕಾರ್ಯಕ್ರಮಗಳು, ವಿವಿಧ ರಫ್ತು ಪೂರಕ ಯೋಜನೆಗಳ ಅನುಷ್ಠಾನಗೊಳಿಸುವ ಸಂಸ್ಥೆಯಾಗಿರುತ್ತದೆ.

ಈ ಕಾರ್ಯಕ್ರಮಗಳು ಹಾಗೂ ಯೋಜನೆಗಳು ಸೇರಿದಂತೆ, ರಾಜ್ಯ ಸರ್ಕಾರದ ವ್ಯಾಪಾರ ಉತ್ತೇಜನಕ್ಕೆ ಸಂಬಂಧಿಸಿದ ಮಾರುಕಟ್ಟೆ ಅಭಿವೃದ್ಧಿ ಸಹಾಯಧನ ಹಾಗೂ ಇತರೇ ಸೌಲಭ್ಯಗಳನ್ನು ಪಡೆಯಲು ವಿಟಿಪಿಸಿ ಸಂಸ್ಥೆಯ ಸದಸ್ಯತ್ವವನ್ನು ಪಡೆಯುವುದು ಅಗತ್ಯವಾಗಿರುತ್ತದೆ.

ಬೃಹತ್ ಉದ್ಯಮಗಳು, ಎಂ.ಎಸ್.ಎಂ.ಇ., ಹಾಗೂ ಕುಶಲಕರ್ಮಿಗಳಿಗೆ ಸದಸ್ಯತ್ವ ಶುಲ್ಕವನ್ನು 2023-2024ನೇ ಸಾಲಿನಿಂದ ಅನ್ವಯವಾಗುವಂತೆ ಪರಿಷ್ಕರಿಸಿ ನಿಗದಿ ಪಡಿಸಲಾಗಿದೆ.

| | ವರ್ಗ | ಸದಸ್ಯತ್ವ ಶುಲ್ಕ | ಅವಧಿ |
|---|---|---|---|
| 1 | Small, Medium & Large-scale Enterprises (ಸಣ್ಣ, ಮಧ್ಯಮ ಹಾಗೂ ಬೃಹತ್ ಉದ್ಯಮಗಳು) | Rs.5,000 + GST | 2 years |
| 2 | Artisans and Micro Enterprises (ಕುಶಲಕರ್ಮಿ ಹಾಗೂ ಅತೀ ಸಣ್ಣ ಉದ್ಯಮಗಳು) | Rs.1,000 + GST | 2 years |

**ಷರತ್ತು ಮತ್ತು ನಿಬಂಧನೆ**

1. ಸದಸ್ಯತ್ವಕ್ಕೆ ಅರ್ಜಿಯನ್ನು ನಿಗದಿತ ನಮೂನೆಯಲ್ಲಿ ಸೂಕ್ತ ದಾಖಲೆಗಳೊಂದಿಗೆ ಸಲ್ಲಿಸಬೇಕು.
2. ಈ ಸದಸ್ಯತ್ವವನ್ನು ವರ್ಗಾಹಿಸುವಂತಿಲ್ಲ.
3. ಸದಸ್ಯತ್ವ ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ.
4. ಸದಸ್ಯತ್ವವನ್ನು ಪಡೆದ ಉದ್ಯಮ/ ಕುಶಲಕರ್ಮಿಗಳು ಸರ್ಕಾರದ ಆದೇಶಗಳನ್ವಯ ಅರ್ಹ ಸಹಾಯ ಪಡೆಯಲು ಅನುಕೂಲವಾಗುತ್ತದೆ.
5. ಸದಸ್ಯತ್ವ ಪಡೆಯುವುದರಿಂದ ವಿಟಿಪಿಸಿ ಯಿಂದ ಒದಗಿಸುವ ಯಾವುದೇ ಸೇವೆ/ ಅನುಷ್ಠಾನಗೊಳಿಸುವ ಸರ್ಕಾರದ ಯೋಜನೆಯನ್ನು ಪಡೆಯಲು ಅಧಿಕೃತ ಹಕ್ಕು ಎಂದು ಭಾವಿಸಬಾರದು.
6. ಸದಸ್ಯತ್ವವನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕು ವಿಟಿಪಿಸಿ ಸಂಸ್ಥೆಯದ್ದಾಗಿರುತ್ತದೆ.

ನಿರ್ದೇಶಕರು (ರಫ್ತು) ಹಾಗೂ
ವ್ಯವಸ್ಥಾಪಕ ನಿರ್ದೇಶಕರು, ವಿಟಿಪಿಸಿ

ವಿಟಿಪಿಸಿ ಕಟ್ಟಡ, ಕಸ್ತೂರಬಾ ರಸ್ತೆ, ಬೆಂಗಳೂರು - 560 001. ದೂರವಾಣಿ: 080-2286 0644, 2253 4444
ಇಮೇಲ್: vtpckarnataka@gmail.com ವೆಬ್‌ಸೈಟ್: www.vtpc.karnataka.gov.in